## ಕವಿತೆ



ತೆಲುಗು ಮೂಲ: **ತನಕೇಳ್ಳ ಭರಣಿ**
ಕನ್ನಡಕ್ಕೆ: **ಕೆ.ವೈ. ನಾರಾಯಣಸ್ವಾಮಿ**
ಕಲೆ: ವಿಶ್ವನಾಥ್ ಎ.ಎಸ್.



# ಶೃಂಗಾರ ಗಂಗಾವತರಣ



ಅದೇ ಅದೇ ಗಂಗಾ, ಕರುಣಾಂತರಂಗಾ
ಬಾನಿಂದ ಬುವಿಗಿಳಿದಳು ಪಾಪವ ತೊಳೆವಂಗೆ ॥
ರಂಗನ ಉಂಗುಷ್ಟದಲ್ಲಿ ಹುಟ್ಟಿದವಳು ಗಂಗೆ
ಲಿಂಗನಾ ನೆತ್ತಿಯ ಮೇಲೆ ಹರಿದವಳೆ ಚೋದ್ಯದಂಗೆ ॥

ರಮಣೀಯವಲ್ಲವೇನು ಗಂಗೆಮಾಯಿ ಚರಿತೆಯು
ಇನ್ನೊಮ್ಮೆ ಹಾಡೋಣ ಇಂಪಾಗಿ ಕೇಳೋಣ ॥
ಸಗರರೆಲ್ಲಾ ಶಾಪದಿಂದ ಬೆಂದು ಬೂದಿಯಾದರು
ಮುಕ್ತಿ ಕೊಡಿಸಲವರಿಗೆಂದು ಭಗೀರಥ ಹೊರಟು ನಿಂತ ॥

ತಪ ಮಾಡಲೆಷ್ಟೋವರ್ಷ, ಘನ ಘೋರವಾಗಿ ಮೊರೆಯೆ
ಆಸೆಯು ಕೈಗೂಡಿದಂಗೆ ಕರುಣಿಸಿದಳು ಗಂಗೆ ॥
ತಾಯಿ ನೀನು ಇಳಿದು ಬಾ ತಾತರ ತಲೆ ನೆನೆಸು ಬಾ
ಧನ್ಯವಾಗಲಿ ಎಮ್ಮಕುಲ ನಿನ್ನ ಸೋಂಕಿನಿಂದ ॥

ನೀನು ಬಯಸಿದಂತೆ ನಾನು ಧುಮುಕುವೆನು ಬಾನಿಂದ
ನನ್ನ ರಭಸ ಭರಿಸುವಂತ ಗಂಡು ಯಾರು ಛಲದಿಂದ ॥
ಮರು ಕ್ಷಣವೇ ಭಗೀರಥ ಪರಶಿವನ ಪಾದವಿಡಿದ
ಕರುಣಾಳು ಪರಮಶಿವನು ವರವನಿತ್ತು ತಾ ಒಲಿದ.॥

ಭಗೀರಥನ ಮನದುಂಬಿ ಮೊರೆವೆಯಾಗಿ ಹರಿಯಿತು
ತುಳುಕಿದ ಕಣ್ಣೀರು ತಾ ಶಿವನ ಪಾದ ತೊಳೆಯಿತು ॥
ಹೊರಟು ನಿಂತಳು ಗಂಗೆ ಉಕ್ಕಿ ಉಕ್ಕಿ ಬರುವಂಗೆ
ಉದ್ವೇಗಗೊಂಡವಾಗ ಭಗೀರಥನ ಅಂಗಾಂಗ ॥

